ಮಾಡುತ್ತಿದ್ದಾನಂತೆ! ಅದಕ್ಕಾಗಿ, ಆತ ಎಲ್ಲಾ ಶೂಗಳ ಗ್ರಾಹಕರ ವಿವರ ಪಡೆದುಕೊಂಡಿದ್ದನಂತೆ. ಇನ್ನೊಂದು ಕುತೂಹಲಕಾರಿ ಸಂಗತಿಯೆಂದರೆ, ಜೈನ್ ರಸ್ತೆಯ ಅಂಗಡಿಗೆ ಶಿವದಾಸ್ ಭೇಟಿ ನೀಡಿರಲಿಲ್ಲ!

ನಾನು ಶಿವದಾಸನಿಗೆ ಕರೆ ಮಾಡಿದಾಗ, 'ಈ ಸಂಖ್ಯೆ ಚಾಲನೆಯಲ್ಲಿ ಇಲ್ಲ' ಎಂಬ ಸಂದೇಶ ಬಂದಿತು!

"ಹಾಗೇ ಆಗುತ್ತೆಂದು ಊಹಿಸಿದ್ದೆ! ಆತ ಪಿಎಚ್.ಡಿ. ಮಾಡುತ್ತಿರುವುದು ಸುಳ್ಳು!!"

"ಹಾಗಿದ್ದರೆ ಆತನೇ ಶೂಗಳನ್ನು ಕದ್ದವನೇ?"

"ನಿಸ್ಸಂಶಯವಾಗಿ."

ನಾವು ಅಂಗಡಿಯವರಲ್ಲಿ ಸಿಸಿಟೀವಿ ಫೂಟೇಜ್ ನೋಡಿದೆವು. ಅಂಗಡಿಯಾತನ ಅಂದಾಜಿನಂತೆ, ಹೆಚ್ಚು ಎತ್ತರವಿಲ್ಲದ ಶಿವದಾಸನಿಗೆ ಕಳವಾದ ಎಂಟು ಸೈಜಿನ ಶೂಗಳು ಸರಿಹೊಂದಬಹುದು! ಶಿವದಾಸನ ಚಿತ್ರವೊಂದನ್ನು ಪಡೆದು, ನಾವು ಅಲ್ಲಿಂದ ಹೊರಬಿದ್ದೆವು.

★★★

ಮರುದಿನ ಬೆಳಗ್ಗೆ ಕರಮಚಂದನ ಸೂಚನೆಯಂತೆ ನಾನು, ವೃತ್ತ ನಿರೀಕ್ಷಕ ವೆಲಂಟೈನ್ ಡಿಸೋಜನನ್ನು ಭೇಟಿಯಾಗಲು ನಗರ ಪೊಲೀಸ್ ಠಾಣೆಗೆ ಹೋದೆ. ಒಳಗೊಳಗೇ ಒಂಥರಾ ಅಳುಕು. ನನ್ನ ಅನುಮಾನ ಹುಸಿಯಾಗಲಿಲ್ಲ. 'ಶೂಗಳು ಕಳವಾದ ಬಗ್ಗೆ ಯಾರಾದರೂ ದೂರು ನೀಡಿದ್ದಾರೆಯೇ?' ಎಂಬ ನನ್ನ ಪ್ರಶ್ನೆಗೆ ಡಿಸೋಜ ಸೂರು ಹಾರುವಂತೆ ನಕ್ಕ.

"ಸಾರ್, ಕರಮಚಂದರು ಬುದ್ಧಿವಂತರು ಅಂತ ಬಲ್ಲೆ. ಕ್ಲಿಷ್ಟ ಪ್ರಕರಣಗಳಲ್ಲಿ ಅನೇಕ ಬಾರಿ ಅವರ ನೆರವು ತೆಗೆದುಕೊಂಡದ್ದಿದೆ. ಆದರೆ, ಇದು ಮಾತ್ರ ತೀರಾ ಕ್ಷುಲ್ಲಕವೆನಿಸುತ್ತೆ. ಚಪ್ಪಲಿ ಕಳವು ಬಗ್ಗೆ ತನಿಖೆ ಮಾಡೋಕೆ ನಮ್ಗೆ ಪುರುಸೊತ್ತು ಎಲ್ಲಿದೆ? ದೂರು ಕೊಟ್ಟರೂ, ಅದನ್ನು ತೆಗೆದುಕೊಳ್ಳುವ ದಡ್ಡತನ ನಾವು ಮಾಡೋದಿಲ್ಲ. ಈ ಚಿಪ್ಪಣ್ಣನ ಕೊಲೆ ಪ್ರಕರಣ ನಮ್ ತಲೆ ತಿನ್ತಾ ಇದೆ. ಬೇರೆ ವಿಷ್ಯ ಮಾತಾಡೋದಕ್ಕೂ ನಮ್ಗೆ ಪುರುಸೊತ್ತಿಲ್ಲ."

ಕೆಲದಿನಗಳ ಹಿಂದೆ ಪತ್ರಿಕೆಗಳಲ್ಲಿದ್ದ ಚಿಪ್ಪಣ್ಣನ ಕೊಲೆ ಪ್ರಕರಣದ ವರದಿ ನೆನಪಾಯಿತು.

"ಕೊಲೆಗಾರ ಏನೂ ಸುಳಿವು ಬಿಟ್ಟಿಲ್ಲವೇ?" ಡಿಸೋಜನನ್ನು ಖುಷಿ ಪಡಿಸಲು ನಾನು ವಿಚಾರಿಸಿದೆ.

"ಕೊಲೆಗೆ ಮೋಟಿವ್ ಏನೆಂದೇ ಗೊತ್ತಾಗ್ತಿಲ್ಲ. ಚಿಪ್ಪಣ್ಣನ ಮನೆಯಲ್ಲಿ ಹತ್ತು ಲಕ್ಷ ನಗದು ಇತ್ತು, ಅದನ್ನು ಕೊಲೆಗಾರ ಒಯ್ದಿಲ್ಲ. ಅಂದರೆ ಹಣಕ್ಕಾಗಿ ಕೊಲೆ ನಡೆದಿಲ್ಲ. ಇರಲಿ, ಇನ್ನೇನಾದರೂ ಮಾತಾಡೋದಿದೆಯಾ?"

ಆ ಪ್ರಶ್ನೆಯಲ್ಲಿ ನನ್ನನ್ನು ಸಾಗಹಾಕುವ ಉದ್ದೇಶ ಸ್ಪಷ್ಟವಾಗಿತ್ತು. ನಾನು ಹೊರಡಬೇಕೆನ್ನುವಷ್ಟರಲ್ಲಿ, ಹೊರಗಡೆ ಜೋರಾದ ದನಿ ಕೇಳಿ ಬಂತು. ಅಧಿಕಾರಿಯನ್ನು ಭೇಟಿಯಾಗಬೇಕೆಂದು ಒಬ್ಬಾಕೆ ಒತ್ತಾಯಿಸುತ್ತಿರುವ ದನಿ ತೂರಿಬಂತು. ಆಕೆಯ ಬೊಬ್ಬೆಯಲ್ಲಿ ಕಿವಿಗಪ್ಪಳಿಸಿದ 'ಶೂ' ಎಂಬ ಪದ ನನ್ನನ್ನು ಕದಲದಂತೆ ಮಾಡಿತು. ಕೆಲಕ್ಷಣಗಳಲ್ಲಿ, ಆಕೆ ಒಬ್ಬ ಗಂಡಸಿನೊಂದಿಗೆ ಒಳಗೆ ಪ್ರವೇಶಿಸಿದಳು. ಗಂಡಸಿನ ಹಣೆಯಲ್ಲಿದ್ದ ಗಾಯದಲ್ಲಿ ನೆತ್ತರು ಹೆಪ್ಪುಗಟ್ಟಿತ್ತು.

ಆಕೆ ಡಿಸೋಜನಲ್ಲಿ ಹೇಳಿದ್ದಿಷ್ಟು. ಆಕೆಯ ಹೆಸರು ಆಶಾ. ಗಾಯಗೊಂಡಾತ ಆಕೆಯ ಪತಿ ತಿಮ್ಮಯ್ಯ. ಅವರ ಮನೆಯಿರೋದು ಮೀನುಪೇಟೆ ಬಳಿ. ಮಧ್ಯಾಹ್ನ ಮೂರರ ಹೊತ್ತಿಗೆ ಏನೋ ಸದ್ದು ಕೇಳಿ, ಮಲಗಿದ್ದ ತಿಮ್ಮಯ್ಯನಿಗೆ ಎಚ್ಚರವಾಯಿತಂತೆ. ಹೊರಗಡೆ ಬಂದು ನೋಡಿದರೆ, ಒಬ್ಬಾತ ಚಪ್ಪಲಿ ಸ್ಟ್ಯಾಂಡಿನಿಂದ ತಾನು ಇತ್ತೀಚೆಗಷ್ಟೇ ಖರೀದಿಸಿದ್ದ ಹೊಸ ಶೂವನ್ನು ಹೊರತೆಗೆಯುತ್ತಿದ್ದನಂತೆ. ತಿಮ್ಮಯ್ಯನನ್ನು ಕಂಡು ಗಾಬರಿಯಾದ ಆತ ಅಲ್ಲೇ ಬಿದ್ದಿದ್ದ ದೊಣ್ಣೆಯೊಂದರಿಂದ ಹಲ್ಲೆ ನಡೆಸಿ,